ತಿಳಿಸಿದರು. ಈ ಮನವಿಯನ್ನು ಪರಿಶೀಲಿಸಿ ಈ ರೀತಿ ತನಿಖಾಧಿಕಾರಿಯನ್ನು ಬದಲಾವಣೆ ಮಾಡುವ ಅವಶ್ಯಕತೆ ಇಲ್ಲವೆಂದು ಈ ಕೆಳಕಂಡ ಕಾರಣಗಳಿಂದ ನಿರ್ಧರಿಸಲಾಯಿತು.

೧. ಶ್ರೀ. ಮರಿಸ್ವಾಮಿಯವರು ಹಿರಿಯ ಪೋಲೀಸ್ ಅಧಿಕಾರಿಯಾಗಿದ್ದು ಹೆಚ್ಚು ಶ್ರಮ ಮತ್ತು ಸೂಕ್ತ ರೀತಿಯಲ್ಲಿ ತನಿಖೆಯನ್ನು ನಡೆಸುತ್ತಿದ್ದಾರೆ.

೨. ಶ್ರೀ ಮರಿಶ್ವಾಮಿಯವರ ತನಿಖೆಗೂ ಅವರಿಗಿಂತ ಹಿಂದೆ ಶ್ರೀ. ಜಗನ್ನಾಥ ರೈ ನಡೆಸಿದ ತನಿಖೆಗೂ ಯಾವ ವಿರೋಧಾಭ್ಯಾಸಗಳೂ ಕಂಡು ಬಂದಿಲ್ಲ.

೩. ಮಾನ್ಯ ಸದಸ್ಯರು ಮನವಿ ಸಲ್ಲಿಸಿದ ವೇಳೆ ಶ್ರೀ ಜಗನ್ನಾಥ ರೈ ರವರು ವೃತ್ತಿಯ ಮೇಲೆ ಹಾಜರಿರಲಿಲ್ಲ.

ಈ ಎಲ್ಲಾ ಕಾರಣಗಳಿಂದ ತನಿಖೆಯನ್ನು ಪುನಃ ಜಗನ್ನಾಥ ರೈ ರವರಿಗೆ ವಹಿಸುವುದಕ್ಕಿಂತ ಅವರು ವೃತ್ತಿಗೆ ಮರಳಿ ಬಂದ ಮೇಲೆ ಈ ತನಿಖೆಯ ಕಾರ್ಯವನ್ನು ನಿರ್ವಹಿಸುವಲ್ಲಿ ಅವರಿಗೂ ಸಹ ಜವಾಬ್ದಾರಿ ಕೊಟ್ಟು ತನಿಖೆಯನ್ನು ಮುಂದುವರಿಸಲಾಗುತ್ತಿದೆ.

ತನಿಖೆಯು ಇನ್ನೂ ಮುಂದುವರಿದಿದೆ. ತನಿಖೆ ಮುಕ್ತಾಯವಾಗದೆ ಅಪರಾಧವನ್ನು ಮುಚ್ಚಿಡಲಾಗಿದೆ ಅಥವಾ ಈ ಅಪರಾಧವನ್ನು ಮುಚ್ಚಿಡಲು ಪ್ರಯತ್ನ ನಡೆಯುತ್ತಿದೆ ಎಂಬುದು ಸತ್ಯಕ್ಕೆ ದೂರವಾದುದು.

೬. ಹೊಸದುರ್ಗ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿಯ ವಿತರಣೆಯಲ್ಲಿ ಅವ್ಯವಸ್ಥೆ ಉಂಟಾಗಿರುವುದು

ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಮಾನ್ಯ ಅಧ್ಯಕ್ಷರೆ, ಹೊಸದುರ್ಗ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿ ವಿತರಣೆಯು ಅವ್ಯವಸ್ಥೆ ಆವ್ಯಾಹತವಾಗಿ ಮುಂದುವರಿಯುತ್ತಿರುವುದರಿಂದ ಮನೆ ಬಳಕೆದಾರರು, ಸಣ್ಣ ಕೈಗಾರಿಕೆಗಳವರು ನನ್ನ ಈ ವಿಚಾರದಲ್ಲಿ ಭೇಟಿ ಮಾಡಿ ಸರ್ಕಾರದ ಗಮನವನ್ನು ಸೆಳೆದು ಇದನ್ನು ಸರಿಪಡಿಸಲು ಕೇಳಿದ್ದಾರೆ. ತಾಲ್ಲೂಕಿನ ವಿದ್ಯುಚ್ಛಕ್ತಿ ಅಧಿಕಾರಿಗಳು ಸರ್ಕಾರ ನಿಗದಿಪಡಿಸಿರುವ ವೇಳೆಯಲ್ಲಿ ವಿದ್ಯುಚ್ಛಕ್ತಿ ವಿತರಣೆಯನ್ನು ನಿಲ್ಲಿಸಲೇ, ಆದರೆ ಆ ವೇಳೆಗಿಂತ ಹೆಚ್ಚುಕಾಲ ನಿಲ್ಲಿಸಲು ಕಾರಣವೇನು ? ಇಲಾಖೆಯ ಅನೇಕ ನೌಕರರೇ ಸಿಮೆಂಟ್ ಕಾರ್ಖಾನೆಯವರಿಗೆ ಶಾಮೀಲಾಗಿ ಅವರಿಗೆ ಲಾಭವಾಗುವಂತೆ ಮಾಡಲು ವಿದ್ಯುಚ್ಛಕ್ತಿಯನ್ನು ಬೇರೆ ಬೇರೆ ಕಡೆಗಳಲ್ಲಿ ಕಡಿತಮಾಡಿ ಇವರಿಗೆ ಸಪ್ಲೈ ಮಾಡುತ್ತಿದ್ದಾರೆಂದು ಸ್ಪಷ್ಟ ಆಪಾದನೆ ಇದೆ. ಜಿಲ್ಲಾ ಎಕ್ಸಿಕ್ಯುಟಿವ್ ಇಂಜಿನಿಯರ್‌ರವರ ನಿರ್ಲಕ್ಷ್ಯವೇ ಇದಕ್ಕೆ ಕಾರಣ. ಇದನ್ನು ಪರಿಶೀಲಿಸಲು ತಕ್ಷಣ ಅವರಿಗೆ ಸೂಕ್ತ ಎಚ್ಚರಿಕೆಯನ್ನು ನೀಡಿ ಎಲ್ಲಾ ಕಡೆಯಲ್ಲೂ ಸಮಾನವಾಗಿ ವಿದ್ಯುಚ್ಛಕ್ತಿಯನ್ನು ಒದಗಿಸುವಂತೆ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ವಿದ್ಯುಚ್ಛಕ್ತಿ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ (ಮಾನ್ಯ ವಿದ್ಯುಚ್ಛಕ್ತಿ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಹುಬ್ಬಳ್ಳಿ ವೃತ್ತದ ಅಧೀಕ್ಷಕ ಅಭಿಯಂತರರವರಿಂದ ತನಿಖೆ ಮಾಡಿಸಿ ವರದಿಯನ್ನು ಪಡೆದು ನಂತರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆ.

೭. ದಕ್ಷಿಣ ಕನ್ನಡ ಜಿಲ್ಲೆಯ ಎ.ಪಿ.ಎಂ.ಸಿ. ಸಮಿತಿಯ ವಿಭಜನೆ ಮತ್ತು ಚುನಾವಣೆಯನ್ನು ಮಾಡುವ ಬಗ್ಗೆ

ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಅಧ್ಯಕ್ಷರೆ, ಬೇರೆ ಜಿಲ್ಲೆಗಳಲ್ಲಿ ತಾಲ್ಲೂಕಿಗೊಂದರಂತೆ ಅಥವಾ ೨-೩ ತಾಲ್ಲೂಕಿಗೊಂದರಂತೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿದ್ದರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿಲ್ಲೆಗೊಂದು ಸಮಿತಿ ಇದೆ. ಕಾರ್ಯಕ್ಷೇತ್ರದ ವ್ಯಾಪ್ತಿಯು ವಿಸ್ತಾರ, ಕೆಲಸದ ಬಾಹುಳ್ಯದಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯನ್ನು ೩ ಅಥವಾ ೪ ಸಮಿತಿಗಳನ್ನಾಗಿ ವಿಭಜಿಸಬೇಕೆಂಬ ಸೂಚನೆ ಬಹಳ ವರ್ಷಗಳಿಂದ ಸರ್ಕಾರದ ಮುಂದಿದೆ. ಈ ವಿಚಾರ

ತೀರ್ಮಾನಕ್ಕೆ ಬರುವುದು ಬಿಟ್ಟು ಜೂನ್ ತಿಂಗಳಲ್ಲಿ ಸಮಿತಿಗೆ ಚುನಾವಣೆ ಜರುಗಿಸುವುದಾಗಿ ಘೋಷಣೆ ಮಾಡಲಾಗಿದೆ. ರೈತರೇ ಮತದಾರರಾಗಿರುವ ಈ ಚುನಾವಣೆಯಲ್ಲಿ ಮಳೆಯನ್ನೇ ನಂಬಿ ಬೇಸಾಯದ ಕೆಲಸಮಾಡಬೇಕಾದ ಕೃಷಿಕರು ಮಳೆಗಾಲದ ಸಮಯದಲ್ಲಿ ಮತದಾನಕ್ಕೆ ಬರಲು ಖಂಡಿತ ತೊಂದರೆಯಾಗುತ್ತದೆ. ಪರಿಣಾಮವಾಗಿ ಕೂಲಿ ಜನರಿಂದ ಕೆಲಸ ಮಾಡಿಸಿಕೊಳ್ಳುವ, ಆರ್ಥಿಕವಾಗಿ ಅನುಕೂಲಸ್ಥರಾದ ರೈತರು ಮಾತ್ರ ಮತ ನೀಡುತ್ತಾರೆ. ಹೊಲಗಳಲ್ಲಿ ಸ್ವತಃ ದುಡಿಯುವ ರೈತರು ಮತ ನೀಡುವ ಅವಕಾಶದಿಂದ ವಂಚಿತರಾಗುತ್ತಾರೆ. ಆದ್ದರಿಂದ ದಕ್ಷಿಣ ಕನ್ನಡ ಜಿಲ್ಲೆಯ ಎ.ಪಿ ಎಂ.ಸಿ. ಚುನಾವಣೆಯನ್ನು ಆಕ್ಟೋಬರ್ ತಿಂಗಳಿಗೆ ಮುಂದೂಡಬೇಕು. ವಿಭಜನೆ ಮಾಡಿ ಬೇರೆ ಜಿಲ್ಲೆಗಳಲ್ಲಿರುವಂತೆ ಹೆಚ್ಚಿಗೆ ಎ. ಪಿ. ಎಂ. ಸಿ. ಗಳನ್ನು ಸ್ಥಾಪಿಸಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ತರಿಸಿ ಕೊಡುತ್ತೇನೆ.

೮) ಕರಾವಳಿಯ ಉದ್ದಕ್ಕೂ ಕಡಲ ಕೊರತದಿಂದ ಬಡ ಬೆಸ್ತರಿಗೆ ತೊಂದರೆಯಾಗಿರುವುದು:

ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).—ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿಯ ಉದ್ದಕೂ ಅನೇಕ ವರ್ಷಗಳಿಂದ ಕಡಲ ಕೊರೆತದ ಪರಿಣಾಮವಾಗಿ ತೀರವಾಸಿಗಳಾದ ಬಡಬೆಸ್ತರು ಮತ್ತು ದುರ್ಬಲ ವರ್ಗದವರಿಗೆ ವಿಪರೀತ ತೊಂದರೆಯಾಗಿದೆ. ಜೀವದ ಹಂಗು ತೊರೆದು ಕಡಲಲ್ಲಿ ತೊಳಲಾಡಿ, ದುಡಿದು ಬದುಕುವ ಜನರ ತುಂಡು ಭೂಮಿಯೂ ಕೊರೆತಕ್ಕೀ ಈಡಾಗಿದೆ. ಫಲಬಿಡುವ ತೆಂಗಿನ ಮರಗಳು ಉರುಳಿ ಬೀಳುತ್ತಿವೆ. ವಾಸದ ಮನೆಗಳೂ ನಾಶವಾದ ಸಂದರ್ಭ ಇದೆ ಈ ಕುರಿತು ಕಳೆದ ಕೆಲವು ವರ್ಷಗಳಿಂದ ಸರಕಾರದ ಗಮನವನ್ನು ಜಿಲ್ಲೆಯ ಶಾಸಕರು ಪದೇ ಪದೇ ಸೆಳೆದರೂ, ಯಾವುದೇ ಖಾಯಂ ಪರಿಹಾರ ಆಗಿಲ್ಲ. ಕೇರಳ ರಾಜ್ಯದಲ್ಲಿ ಆದಂತೆ ಇಲ್ಲಿಯೂ ತಡೆ ಗೋಡೆ ರಚಿಸಲ್ಪಟ್ಟಲ್ಲಿ ಕೊರೆತದಿಂದ ರಕ್ಷಣೆ ದೊರಕುತ್ತದೆ. ಇತ್ತೀಚೆಗೆ ಉಡುಪಿ ತಾಲೂಕಿನ ಮಲ್ಪೆಯಲ್ಲಿ ಕೊರೆತ ಸಂಭವಿಸಿತು. ನಷ್ಟಕ್ಕೀಡಾದವರಿಗೆ ಯಾವುದೇ ಪರಿಹಾರ ದೊರೆಕಿಲ್ಲ. ಸರಕಾರದ ದಿವ್ಯ ನಿರ್ಲಕ್ಷ್ಯದಿಂದಾಗಿ ಹಾನಿಗೊಳಗಾದವರಿಗೆ ಸೂಕ್ತ ಪರಿಹಾರ ನೀಡಬೇಕು, ಶಾಶ್ವತ ಸ್ವರೂಪದ ರಕ್ಷಣಾ ತಡೆಗೋಡೆ ರಚಿಸಲು ಶೀಘ್ರ ಕ್ರಮಕೈಗೊಳ್ಳಬೇಕು. ಇದು ಮುಂದಿನ ವರ್ಷವೂ ಬರಿಯ ಆಶ್ವಾಸನೆ ಆಗಿ ಉಳಿಯಬಾರದು ಎಂದು ಸರ್ಕಾರವನ್ನು ನಾನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ).—ಅಲ್ಲಿ ತಾತ್ಕಾಲಿಕ ಕಾಮಗಾರಿಗಳು ಮತ್ತು ಶಾಶ್ವತ ಕಾಮಗಾರಿಗಳನ್ನು ಕೂಡ ಹಂತಹಂತವಾಗಿ ತೆಗೆದುಕೊಳ್ಳಲಾಗುತ್ತಿದೆ. ಉಡುಪಿ ತಾಲ್ಲೂಕಿನ ಮುಳೂರು ಗ್ರಾಮದಲ್ಲಿ ಹೋದ ವರ್ಷ ಸಮುದ್ರ ಕೊರೆತದಿಂದ ನಷ್ಟ ಅನುಭವಿಸಿದ ಬಡವರಿಗೆ ಮಾನ್ಯ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ಹಣ ಒದಗಿಸಲಾಗಿದೆ. ಸರ್ವಶ್ರೀ ಕೃಷ್ಣಪ್ಪ ವಿ. ಕರ್ಕೇರ, ಅಮಿಯ ವಿ. ಕರ್ಕೇರ, ಸೋಮಪ್ಪ ಕೊಲಿಯಾನ್ ಮತ್ತು ಶ್ರೀಮತಿ ನರಸಿ ಕಾರ್ಕಳತಿ ಇವರಿಗೆ ತಲಾ ಎರಡು ಸಾವಿರ ಪರಿಹಾರ ಕೊಡಲಾಗಿದೆ. ೧೯೮೭-೮೮ ನೇ ಸಾಲಿನಲ್ಲಿ ಸುಮಾರು ೨೨೦ ಮೀಟರ್ ಉದ್ದದ ಪ್ರದೇಶದಲ್ಲಿ ಸಮುದ್ರದ ಕೊರೆತದ ತಾತ್ಕಾಲಿಕ ರಕ್ಷಣಾ ಕೆಲಸದ ಕಾಮಗಾರಿಗಳನ್ನು ಮಾಡಲಾಯಿತು. ಇಂತಹ ತಾತ್ಕಾಲಿಕ ಕಾಮಗಾರಿಗಳಿಗೆ ಸುಮಾರು ೯೮ ಸಾವಿರ ರೂಪಾಯಿಗಳು ವೆಚ್ಚವಾಗಿದೆ. ಶಾಶ್ವತ ರಕ್ಷಣಾ ಕಾಮಗಾರಿಗಳಿಗೂ ಕೂಡ ರಾಜ್ಯ ಸರ್ಕಾರ ಹಣ ಒದಗಿಸುತ್ತಿದೆ. ನೀರಾವರಿ ಇಲಾಖೆ ಸಮುದ್ರ ಕೊರೆತ ನಿರೋಧ ಧನ ಯೋಜನೆಗಳನ್ನು ರೂಪಿಸಿ ಹಂತಹಂತವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶಗಳಲ್ಲಿ ಇದನ್ನು ಕಾರ್ಯಗತಗೊಳಿಸುತ್ತೇವೆ. ೧೯೮೬-೮೭ ನೇ ಸಾಲಿನಲ್ಲಿ ೬೬ ಲಕ್ಷ ರೂಪಾಯಿ ಮತ್ತು ೪೭-೮೮ ನೇ ಸಾಲಿನಲ್ಲಿ ೫೭ ಲಕ್ಷ ರೂಪಾಯಿಗಳನ್ನು ಇಂತಹ ಕಾಮಗಾರಿಗಳಿಗೆ ಖರ್ಚು ಮಾಡಲಾಗಿದೆ. ಪ್ರಸಕ್ತ ಹಣಕಾಸಿನ ಸಾಲಿನಲ್ಲಿ ೭೫ ಲಕ್ಷ ರೂಪಾಯಿಗಳನ್ನು ಸಮುದ್ರ ಕೊರೆತ ನಿರೋಧ ಧನಯೋಜನೆಗೆ ಒದಗಿಸಲಾಗಿದೆ. ಸಮರ್ಪಕವಾದ ಕಾಮಗಾರಿಗಳನ್ನು ಹಂತಹಂತವಾಗಿ ತೆಗೆದುಕೊಳ್ಳಲಾಗುತ್ತಿದೆ.

ಮಾನ್ಯ ಸದಸ್ಯರುಗಳಾದ ಶ್ರೀ ವಿನಯಕುಮಾರ್ ಸೊರಕೆ ಮತ್ತು ಶ್ರೀ ವಸಂತ ವಿ. ಸಾಲಿಯಾನ್ ಅವರುಗಳು ಗೈರು ಹಾಜರಿದ್ದರು.